

# ಯಾರಿವರು..?

■ ಗೌರಿ

**ಮಹಾನಗರದ ಆತ್ಮವನ್ನು ಹಿಡಿಯುವುದು ಬಲುಕಷ್ಟದ ಕೆಲಸ. ಈ ಸಾಹಸಕ್ಕೆ ಕೈಹಾಕಿದ ಕಾರಣಕ್ಕಾಗಿ ‘ಮರೀಚಿ’ ಗಮನಸೆಳೆಯುತ್ತದೆ**

ಯಾರಿವರು?
ನಗರದ ರಕ್ತನಾಳಗಳಲ್ಲಿ ಹರಿಯುವವರು
ಅಲೆಯುತ್ತ ಅರಸುತ್ತ ಕನಸುತ್ತ
ಮರೆಯಾಗುವವರು
ಇಲ್ಲಾ ಬೆಳಗುವವರು

ಮಹಾನಗರವೆಂಬುದು ನಿತ್ಯವೂ ಘಟಿಸುತ್ತಿರುವ, ಸದಾ ರೂಪುಗೊಳ್ಳುತ್ತಲೇ ಇರುವ ಒಂದು ಪ್ರಕ್ರಿಯೆ. ಹಾಗಾಗಿಯೇ ಅದರ ಗುಣವನ್ನು, ಆತ್ಮವನ್ನು ಶಾಶ್ವತವೆಂಬಂತೆ ಹಿಡಿಯುವುದು ಕಷ್ಟ. ಹಾಗಾಗಿಯೇ ಮಹಾನಗರದ ಆತ್ಮವನ್ನು ದಟ್ಟವಾಗಿ ಪ್ರತಿಫಲಿಸುವ ಸಾಹಿತ್ಯ, ಸಿನಿಮಾ ಅಥವಾ ಇನ್ನಾವುದೇ ಪ್ರಕಾರದ ಕಲಾಕೃತಿ ವಿರಳವೇ.

ಇಂಥದ್ದೊಂದು ಪ್ರಯತ್ನದ ಕಾರಣಕ್ಕೇ ‘ಮರೀಚಿ’ ಕಿರುಚಿತ್ರ ಗಮನಸೆಳೆಯುತ್ತದೆ. ಮಹಾನಗರದ ಆತ್ಮವನ್ನು ಹಿಡಿಯುವುದು ಎಷ್ಟು ಕಷ್ಟವೋ, ಅದರ ಬಗೆಗಿನ ಕ್ಲೀಷೆಗಳನ್ನು ಮೀರಿ ಮಾತಾಡುವುದೂ ಅಷ್ಟೇ ಕಷ್ಟ. ಹಾಗಾಗಿಯೇ ಇಲ್ಲಿ ನಿರ್ದೇಶಕರು ಕಾವ್ಯದ ಮೊರೆ ಹೊಕ್ಕಿದ್ದಾರೆ. ಮಹಾನಗರದ ಕುರಿತ ಬೇರೆ ಬೇರೆ ಕಾವ್ಯದ ಸಾಲುಗಳನ್ನು ಸೇರಿಸಿ ಒಂದು ಕೊಲಾಜ್ ರೀತಿ ಇಡೀ ಕಿರುಚಿತ್ರವನ್ನು ವಿನ್ಯಾಸಗೊಳಿಸಿದ್ದಾರೆ.

ಕೊಲಾಜ್ ರೀತಿ ಕಾಣಿಸುವ ದೃಶ್ಯಗಳೇ ಈ ನಗರದ ಖುಷಿ, ತಲ್ಲಣ, ಆಗಂತುಕತೆ, ಏಕಾಕಿತನ, ಸಂಭ್ರಮ, ನೋವು, ಜಂಜಡ ಎಲ್ಲವನ್ನೂ ಬಿಂಬಿಸುತ್ತ ಹೋಗುತ್ತದೆ. ನಾಯಕನಿಗೆ ನಗರ ತೆರೆದುಕೊಳ್ಳುವ ರೀತಿ ಮತ್ತು ನಗರದಲ್ಲಿ ಭೇಟಿಯಾಗುವ ಹುಡುಗಿ ತೆರೆದುಕೊಳ್ಳುವ ರೀತಿ ಸಮೀಕರಿಸಿರುವುದು, ಆ ಹುಡುಗಿಯೇ ನಗರದ ರೂಪಕವೂ ಆಗಿಬಿಡುವುದು ದೃಶ್ಯಪಥಕ್ಕೂ ಕಾವ್ಯದ ಧ್ವನಿಶಕ್ತಿಯನ್ನು ಕೊಟ್ಟಿದೆ.



**ಹೆಸರು:** ಮರೀಚಿ
**ನಿರ್ದೇಶನ:** ಆಕರ್ಷ ಕಮಲ
**ಸಂಕಲನ:** ಸ್ಪರ್ಶ ಆರ್‌.ಕೆ.
**ಸಂಗೀತ:** ಗಗನ್ ಬಡೆಯಾ
**ಛಾಯಾಗ್ರಹಣ:** ಕಿಟ್ಟಿ ಕೌಶಿಕ್
**ಧ್ವನಿ:** ವಿಕಾಸ್ ವಸಿಷ್ಠ
**ತಾರಾಗಣ:** ರಾಕೇಶ ಮಯ್ಯ, ಸ್ಪರ್ಶಾ ಆರ್‌.ಕೆ. ಧನುಶ್ ಆರ್ಯ

ಹೇಳುವುದನ್ನೇ ತೋರಿಸಿದರೆ ಅದು ಮಿತಿಯಾಗುತ್ತದೆ. ಆದರೆ ಆ ಮಿತಿಯನ್ನು ಮೀರುವ ಪ್ರಯತ್ನ ಈ ಕಿರುಚಿತ್ರದಲ್ಲಿ ಕಾಣುತ್ತದೆ. ಇವು ಕಾವ್ಯದ ಸಾಲಿಗೆ ಹೊಸದೇ ಧ್ವನಿಶಕ್ತಿಯನ್ನು ಕೊಡುವ ಹಾಗಿದೆ. ಮಹಾನಗರದ ದೈನಂದಿನ ಕತೆಗಳನ್ನೇ ವಿಶೇಷ ಪ್ರಭೆಯಲ್ಲಿ ಕಾಣಿಸುತ್ತವೆ. ಹಾಗಾಗಿಯೇ ಇಡೀ ಕಿರುಚಿತ್ರವೇ ಒಂದು ಕಾವ್ಯದ ಹಾಗೆ ರಿಂಗಣಿಸುತ್ತ ಹೋಗುತ್ತದೆ.

ಇಷ್ಟೆಲ್ಲ ಆಗಿಯೂ ಈ ಮಹಾನಗರವನ್ನು ಅರಗಿಸಿಕೊಳ್ಳಲು, ಅರ್ಥಮಾಡಿಕೊಳ್ಳಲು ನಾಯಕನಿಗೆ ಸಾಧ್ಯವಾಗಿಲ್ಲ. ‘ಇರಬಹುದು’ ಅಥವಾ ‘ಅಲ್ಲವೇನೋ’ ಎಂಬ ಗೊಂದಲವೇ ಅವನಲ್ಲಿ ಉಳಿದಿದೆ. ಆ ಗೊಂದಲವೇ ಈ ನಗರದ ಜಂಜಡದಲ್ಲಿ ಅವನನ್ನು ಮುನ್ನಡೆಸುತ್ತಿದೆ. ಈಗಿರುವುದು ಇನ್ನೊಂದು ಕ್ಷಣದಲ್ಲಿ ಅಲ್ಲವಾಗುವ, ಬೇರೆಯೇ ಏನೋ ಆಗುವ ರೂಪಾಂತರವನ್ನು ತನ್ನ ಸ್ವಭಾವವನ್ನೇ ಆಗಿಸಿಕೊಂಡಿರುವ ನಗರವನ್ನು ಹೀಗೆಯೇ ಎಂದು ಹಿಡಿದಿಡುವುದು ಹೇಗೆ? ಹಾಗೊಮ್ಮೆ ಹಿಡಿದರೂ ಅದು ಅಲ್ಲವೇನೋ ಎಂಬ ಅನುಮಾನವೂ ಅದರ ಜೊತೆಗೇ ಉಳಿದುಬಿಡುತ್ತದೆ. ಈ ಅನುಮಾನವೇ ಈ ಕಿರುಚಿತ್ರದ ಸೂತ್ರವಾಗಿ ಉಳಿದೆಲ್ಲ ದೃಶ್ಯಿಕೆಗಳನ್ನು ಹೆಣೆದಿದೆ. ನಗರದ ರಕ್ತನಾಳಗಳಲ್ಲಿ ಹರಿಯುತ್ತ, ಅಲೆಯುತ್ತ ಅರಸುತ್ತ ಕನಸುತ್ತ ಮರೆಯಾಗುವವರು ಇಲ್ಲಾ ಬೆಳಗುವವರ ಬದುಕಿನ ರೇಕುಗಳನ್ನು ನಮಗೆ ಮಿಂಚಿನ ಹಾಗೆ ಕಾಣಿಸುತ್ತದೆ.

ಕಿರುಚಿತ್ರದ ವಸ್ತು, ನಿರೂಪಣೆಯಲ್ಲಿರುವ ಶಕ್ತಿಗೆ ತಾಂತ್ರಿಕ ಬೆಂಬಲ ಸಿಕ್ಕದೆ ಇರುವುದು ಇದರ ಮಿತಿಗಳಲ್ಲೊಂದು. ಸಂಕಲನ, ಧ್ವನಿವಿನ್ಯಾಸದ ಮೂಲಕ ಅನುಭವವನ್ನು ಇನ್ನಷ್ಟು ದಟ್ಟವಾಗಿಸುವ ಸಾಧ್ಯತೆ ಇಲ್ಲಿ ಕೈಜಾರಿದೆ. ಹಾಗಾಗಿಯೇ ಇದು ಎಷ್ಟು ಮನಸ್ಸಿನ ಆಳಕ್ಕೆ ಇಳಿಯಬಹುದಿತ್ತೋ ಅಷ್ಟು ಆಳಕ್ಕೆ ಇಳಿಯುವುದಿಲ್ಲ.

ಈ ಕಿರುಚಿತ್ರ ವೀಕ್ಷಣೆಗೆ **bit.ly/3rKo8Y9** ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.